# <u>ಕರ್ನಾಟಕ ಅರಣ್ಯ ಇಲಾಖೆ</u>

ಸಂಖ್ಯೆ:ಎ6/ಎಸ್‌ಡಿಎಲ್/ ಸಿಆರ್-11/10-11

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 14.03.2011
18

## <u>ಅಧಿಕೃತ ಜ್ಞಾಪನಾ ಪತ್ರ</u>

ವಿಷಯ: ಹಿಡುವಳಿ ಜಮೀನಿನಲ್ಲಿ ಬೆಳೆದ ಶ್ರೀಗಂಧದ ಮರಗಳನ್ನು ತೆಗೆದಿರುವ ಬಾಬ್ತು ರೈತರಿಗೆ / ಮಾಲೀಕರಿಗೆ ಶ್ರೀಗಂಧದ ಮೌಲ್ಯ ಪಾವತಿಸಲು ದರ ನಿಗದಿಪಡಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 16 ಎಫ್‌ಎಸ್‌ಡಬ್ಲ್ಯೂ 2001 ದಿನಾಂಕ: 5.09.2002
2. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ6/ ಎಸ್‌ಡಿಎಲ್/ಜಿಎಲ್-5184/2004-05/2008-09 ದಿನಾಂಕ: 16.07.2008
3. ಸರ್ಕಾರದ ಆದೇಶ ಸಂಖ್ಯೆ: ಅಪಜೀ 76 ಎಫ್‌ಎಸ್‌ಡಬ್ಲ್ಯೂ 2010 ದಿನಾಂಕ: 31.01.2011
4. ಈ ಕಛೇರಿ ಪತ್ರ ಸಂಖ್ಯೆ: ಎ6/ಎಸ್‌ಡಿಎಲ್/ಸಿಆರ್-3 / 2009-10 ದಿನಾಂಕ: 3.2.2011

* * * * *

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ (1)ರ ಅಧಿಸೂಚನೆಯಂತೆ ಕರ್ನಾಟಕ ಅರಣ್ಯ (ತಿದ್ದುಪಡಿ) ನಿಯಮಾವಳಿಯಂತೆ ಹಿಡುವಳಿ ಜಮೀನಿನಲ್ಲಿ ಬೆಳೆದಿರುವ ಶ್ರೀಗಂಧದ ಮಾಲೀಕರಿಗೆ ಶ್ರೀಗಂಧದ ಮೌಲ್ಯ ಪಾವತಿಸುವ ದರವನ್ನು ನಿಯಮ 108 (6)ರಂತೆ ರಾಜ್ಯದ ಶ್ರೀಗಂಧದ ಹರಾಜಿನ ಸರಾಸರಿ ಬೆಲೆಯನ್ನು ಆಧರಿಸಿ ಪ್ರತಿ ವರ್ಷ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಯವರು ನಿಗಧಿಪಡಿಸಬೇಕಾಗಿದೆ.

ತತ್ಸಂಬಂಧ ಉಲ್ಲೇಖ (3) ರ ಸರ್ಕಾರಿ ಆದೇಶದಲ್ಲಿ ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಶ್ರೀಗಂಧದ ಕೋಠಿಗಳಲ್ಲಿ ಕಳೆದ 2 ವರ್ಷಗಳಲ್ಲಿ ಜರುಗಿದ ಶ್ರೀಗಂಧದ ಬಹಿರಂಗ ಹರಾಜಿನ ಸರಾಸರಿ ದರಗಳನ್ನು ಆಧರಿಸಿ ವಿವಿಧ ವರ್ಗಗಳ ಶ್ರೀಗಂಧದ ಚಿಲ್ಲರೆ ಮಾರಾಟ ದರವನ್ನು ಸರ್ಕಾರವು ನಿಗಧಿಪಡಿಸಿದೆ. ಸದರಿ ದರಗಳನ್ನು ಉಲ್ಲೇಖ (4)ರಲ್ಲಿ ರಾಜ್ಯದ ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮತ್ತು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀಗಂಧದ ಕೋಠಿ, ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸಿದೆ. ಕರ್ನಾಟಕ ಅರಣ್ಯ ನಿಯಮಾವಳಿ ನಿಯಮ (ತಿದ್ದುಪಡಿ) 108 (6) ರಂತೆ 2010-11ನೇ ಸಾಲಿಗೆ ಹಿಡುವಳಿ ಜಮೀನಿನಲ್ಲಿ ಬೆಳೆದ ಶ್ರೀಗಂಧದ ಮರಗಳನ್ನು ತೆಗೆಯುವ ಬಾಬ್ತು ರೈತರಿಗೆ / ಮಾಲೀಕರಿಗೆ ಶ್ರೀಗಂಧದ ಮೌಲ್ಯ ಪಾವತಿಸಲು ಶೇ. 10 ರಷ್ಟು ಉಸ್ತುವಾರಿ ವೆಚ್ಚ, ಇಲಾಖಾವತಿಯಿಂದ ಸಾಗಾಣಿಕೆ ಮಾಡಿದಲ್ಲಿ ಸಾಗಾಣಿಕೆ ವೆಚ್ಚ, ಶ್ರೀಗಂಧದ ಪರಿವರ್ತನೆ ವೆಚ್ಚ ಮತ್ತು ಬೇರೆ ಇನ್ಸಿಡೆಂಟಲ್ (Incidental) ವೆಚ್ಚಗಳನ್ನು ಕಡಿತಗೊಳಿಸಿ ದರ ನಿಗದಿಪಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ.

### <u>ಆದೇಶ</u>

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಸರ್ಕಾರವು ದಿನಾಂಕ: 31.01.2011 ರಲ್ಲಿ ವಿವಿಧ ವರ್ಗಗಳ ಶ್ರೀಗಂಧಕ್ಕೆ ನಿಗದಿಪಡಿಸಿದ ದರವನ್ನು ಖಾಸಗಿ ಜಮೀನಿನ ಮಾಲೀಕರಿಗೆ ದಿನಾಂಕ: 31.01.2011 ರಿಂದ ಪೂರ್ವಾನ್ವಯವಾಗುವಂತೆ ಮತ್ತು ಮುಂದಿನ ಆದೇಶದವರೆಗೆ ನಿಗದಿಪಡಿಸಿ ಆದೇಶಿಸಿದೆ. ಕರ್ನಾಟಕ ಅರಣ್ಯ ನಿಯಮಾವಳಿ ನಿಯಮ (ತಿದ್ದುಪಡಿ) 108(6) ರನ್ವಯ ಸರ್ಕಾರವು ದಿನಾಂಕ: 31.01.2011 ರಲ್ಲಿ ನಿಗದಿಪಡಿಸಿದ ದರದಲ್ಲಿ ಶೇ. 10 ರಷ್ಟು ಉಸ್ತುವಾರಿ ವೆಚ್ಚ, ಇಲಾಖಾವತಿಯಿಂದ ಸಾಗಾಣಿಕೆ ಮಾಡಿದಲ್ಲಿ ಮಾತ್ರ ಸಾಗಾಣಿಕೆ ವೆಚ್ಚ,

ಶ್ರೀಗಂಧದ ಪರಿವರ್ತನೆ ವೆಚ್ಚ ಮತ್ತು ಬೇರೆ ಇನ್ಸಿಡೆಂಟಲ್ (Incidental) ವೆಚ್ಚಗಳನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ಶ್ರೀಗಂಧದ ಮಾಲೀಕರಿಗೆ ಪಾವತಿಸಲು ಕ್ರಮ ತೆಗೆದುಕೊಳ್ಳುವುದು.

ಈ ಆದೇಶವು ದಿನಾಂಕ: 31.01.2011 ರಂದು ಮತ್ತು ನಂತರ ರಾಜ್ಯದ ಶ್ರೀಗಂಧದ ಕೋಠಿಗಳಲ್ಲಿ ಸ್ವೀಕೃತವಾದ ಶ್ರೀಗಂಧಕ್ಕೆ ಮಾತ್ರ ಅನ್ವಯವಾಗುತ್ತದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಅರಣ್ಯ ಪಡೆ ಮುಖ್ಯಸ್ಥರು

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಶ್ರೀಗಂಧ ಕೋಠಿ, ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

8/3/11

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: 2010-11 ನೇ ಸಾಲಿಗೆ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ.

<u>ಓದಲಾಗಿದೆ:-</u>

1) ಸರ್ಕಾರ ಆದೇಶ ಸಂಖ್ಯೆ: ಅಪಜೀ 63 ಎಫ್‌ಎಸ್‌ಡಬ್ಲ್ಯೂ 2007, ದಿನಾಂಕ: 24-11-2007.
2) ಸರ್ಕಾರಿ ಆದೇಶ ಸಂಖ್ಯೆ: ಅಪಜೀ 67 ಎಫ್‌ಎಸ್‌ಡಬ್ಲ್ಯೂ 2009, ದಿನಾಂಕ: 06-02-2010.
3) ಸರ್ಕಾರದ ಆದೇಶ ಸಂಖ್ಯೆ: ಅಪಜೀ 24 ಎಫ್‌ಎಸ್‌ಡಬ್ಲ್ಯೂ 2010, ದಿನಾಂಕ: 19-06-2010.
4) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಪತ್ರ ಸಂಖ್ಯೆ: ಎ6/ಎಸ್‌ಡಿಎಲ್/ಚಿಮಾ/ಸಿಆರ್-36/ 2009-10, ದಿನಾಂಕ: 28-09-2010 / 04-10-2010.

<u>ಪ್ರಸ್ತಾವನೆ:-</u>

ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮಗಳು, ಧಾರ್ಮಿಕ ಮತ್ತಿತರ ಸಂಸ್ಥೆಗಳು ಹಾಗೂ ಸಾರ್ವಜನಿಕರಿಗೆ ನೀಡಲು ಶ್ರೀಗಂಧದ ಚಿಲ್ಲರೆ ಮಾರಾಟದ ಬೆಲೆಯನ್ನು ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸಿದ ಆದೇಶಗಳಲ್ಲಿ ನಿಗಧಿಪಡಿಸಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆಯ (1) ರಿಂದ (3) ರ ದಿನಾಂಕ: 24-11-2007, 06-02-2010 ಮತ್ತು 19-06-2010 ರ ಆದೇಶಗಳಲ್ಲಿ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು 2007-08 ಮತ್ತು 2009-10 ನೇ ಸಾಲಿಗೆ ಪರಿಷ್ಕರಿಸಿ ನಿಗಧಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ: 28-09-2010 / 04-10-2010 2010-11 ನೇ ಸಾಲಿಗೆ ಶ್ರೀಗಂಧದ ಚಿಲ್ಲರೆ ಮಾರಾಟ ದರವನ್ನು ಪರಿಷ್ಕರಿಸಿ ನಿಗಧಿಪಡಿಸಲು ವಿವಿಧ ವರ್ಗದ ಶ್ರೀಗಂಧಕ್ಕೆ ರಾಜ್ಯದ ವಿವಿಧ ಸರ್ಕಾರಿ ಶ್ರೀಗಂಧದ ಕೋಠಿಗಳಲ್ಲಿ ನಡೆದ ಕಳೆದ 2 ಹರಾಜುಗಳಲ್ಲಿ ದೊರಕಿದ ದರಗಳ ಅನ್ವಯ ಸರಾಸರಿ ದರವನ್ನು ಕಂಡು ಹಿಡಿದು ಸದರಿ ಸರಾಸರಿ ದರವನ್ನು ಮಾರುಕಟ್ಟೆ ದರವೆಂದು ಪರಿಗಣಿಸಿ, ಈ ಮಾರುಕಟ್ಟೆ ದರವನ್ನು 2009-10 ನೇ ಸಾಲಿನಲ್ಲಿ ವಿವಿಧ ವರ್ಗಗಳ ಶ್ರೀಗಂಧಕ್ಕೆ ಸರ್ಕಾರವು ನಿಗಧಿಪಡಿಸಿದ ಚಿಲ್ಲರೆ ಮಾರಾಟ ದರಗಳೊಂದಿಗೆ ಹೋಲಿಕೆ ಮಾಡಲಾಗಿದೆ. 2010-11 ನೇ ಸಾಲಿಗೆ ವಿವಿಧ ವರ್ಗಗಳ ಶ್ರೀಗಂಧಕ್ಕೆ

ಚಿಲ್ಲರೆ ಮಾರಾಟ ದರವನ್ನು ನಿಗಧಿಪಡಿಸಲು ಕೆಲವು ಮಾನ ದಂಡಗಳನ್ನು ಅನುಸರಿಸಿ 2010-11 ನೇ ಸಾಲಿಗೆ ಅಥವಾ ಮುಂದಿನ ಆದೇಶವರೆಗೆ ಚಿಲ್ಲರೆ ಮಾರಾಟ ದರವನ್ನು ನಿಗಧಿಪಡಿಸಿ ಆದೇಶ ಹೊರಡಿಸಲು ಹಾಗೂ ಪರಿಷ್ಕೃತ ದರವನ್ನು ಸರ್ಕಾರ ನಿಗಧಿಪಡಿಸುವ ದಿನಾಂಕದವರೆಗೆ ಕಳೆದ ವರ್ಷಕ್ಕೆ ಮಂಜೂರಾದ ದರವನ್ನೇ ಮುಂದುವರೆಸಲು ಆದೇಶಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕೋರಿರುತ್ತಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪ್ರತಿ ಮೆಟ್ರಿಕ್ ಟನ್‌ಗೆ ₹. ಲಕ್ಷಗಳಲ್ಲಿ ಪರಿಷ್ಕರಿಸಲು ನಿರ್ಧರಿಸಿ ಮತ್ತು ಪರಿಷ್ಕೃತ ದರವನ್ನು 2010-11 ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ನಿಗಧಿಪಡಿಸಿ, ಅದರೊಂದಿಗೆ ಪರಿಷ್ಕೃತ ದರ ಆದೇಶ ಜಾರಿಗೆ ಬಂದ ದಿನಾಂಕದವರೆಗೆ ಕಳೆದ ವರ್ಷಕ್ಕೆ ಮಂಜೂರಾದ ದರವನ್ನೇ ಮುಂದುವರೆಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 76 ಎಫ್‌ಎಸ್‌ಡಬ್ಲ್ಯೂ 2010, ಬೆಂಗಳೂರು,**
**ದಿನಾಂಕ: 31-01-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು 2010-11 ನೇ ಸಾಲಿಗೆ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೂ ನಿಗಧಿಪಡಿಸಿದೆ ಹಾಗೂ ಪರಿಷ್ಕೃತ ದರ ಆದೇಶ ಜಾರಿಗೆ ಬಂದ ದಿನಾಂಕದವರೆಗೆ ಕಳೆದ ವರ್ಷಕ್ಕೆ ಮಂಜೂರಾದ ದರವನ್ನೇ ಮುಂದುವರೆಸುವಂತೆ ಆದೇಶಿಸಲಾಗಿದೆ.

| ಕ್ರ ಸಂ. | ಶ್ರೀಗಂಧದ ವರ್ಗ | 2010-11 ನೇ ಸಾಲಿಗೆ ನಿಗಧಿಪಡಿಸಿದ್ದ ಚಿಲ್ಲರೆ ಮಾರಾಟ ದರ ಪ್ರತಿ ಮೆಟ್ರಿಕ್ ಟನ್‌ಗೆ ₹. ಲಕ್ಷಗಳಲ್ಲಿ |
|---|---|---|
| **ಹಾರ್ಟ್‌ವುಡ್** | | |
| 1 | ವಿಲಾಯತ್ ಬುಧ್ (ಬಿಲೆಟ್ಸ್-I) | 41.00 |
| 2 | ಚೈನಾ ಬುಧ್ (ಬಿಲೆಟ್ಸ್-II) | 41.00 |
| 3 | ಪಂಜಾರ (ಬಿಲೆಟ್ಸ್-III) | 37.00 |

| | | |
|---|---|---|
| 4 | ಘೋಟ್ಲಾ | 41.00 |
| 5 | ಘಟಬಡಲಾ | 41.00 |
| 6 | ಬಗರ್‌ದಾದ್ | 39.50 |
| 7 | ರೂಬ್–I | 36.25 |
| 8 | ರೂಬ್–II | 37.40 |
| 9 | ರೂಬ್–III | 33.70 |
| 10 | ಜಜ್‌ಮೋಕಲ್–I | 40.75 |
| 11 | ಜಜ್‌ಮೋಕಲ್–II | 37.10 |
| 12 | ಐನ್‌ಬಗರ್ | 40.10 |
| 13 | ಚೆರಿಯಾ | 32.20 |
| 14 | ಐನ್‌ಚಿಲ್ಲಾ | 28.20 |
| 15 | ಹತ್ರಿಚಿಲ್ಲಾ | 19.00 |
| ಮಿಕ್ಸ್ಡ್‌ವುಡ್ | | |
| 16 | ಮಿಲ್ವಾಚಿಲ್ಲಾ | 15.50 |
| 17 | ಬಸೋಲಾಮುಕ್ಲಿ | 11.50 |
| 18 | ಸಾಡಸ್ಟ್ | 7.50 |
| ಸ್ಕ್ರ್ಯಾಪ್‌ವುಡ್ | | |
| 19 | ಚಿಟಚಕ್ಕೆ | 0.655 |
| 20 | ಬಾರ್ಕ್ & ವೇಸ್ಟ್ | 0.135 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್. ರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಅರಣ್ಯ ಸಚಿವಾಲಯಕ್ಕೂ ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೂ ಒದಗಿಸುವಂತೆ ಕೋರಲಾಗಿದೆ.

ಪ್ರತಿ:

1) ಮಹಾಲೇಖಪಾಲರು (ಲೆಕ್ಕ ಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರು ರವರ ಕಛೇರಿ ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3) ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.

4) ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ವನವಿಕಾಸ, ಮಲ್ಲೇಶ್ವರಂ, ಬೆಂಗಳೂರು.
7) ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು / ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು / ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಇವರುಗಳಿಗೆ - ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಮುಖಾಂತರ.
8) ಮಾನ್ಯ ಅರಣ್ಯ ಹಾಗೂ ಸಣ್ಣ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಅರಣ್ಯ) / ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸಂಖ್ಯೆ:ಎ6/ಎಸ್‌ಡಿಎಲ್/ ಸಿಆರ್-3/09-10

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಕಛೇರಿ,
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 03.02.2011

ಪ್ರತಿಯನ್ನು ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು / ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಶ್ರೀಗಂಧದ ಕೋಠಿ, ಮೈಸೂರು / ಧಾರವಾಡ / ಶಿವಮೊಗ್ಗ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಅರಣ್ಯ ಸಂಪನ್ಮೂಲ ನಿರ್ವಹಣೆ

ರವಾನಿಸಲಾಗಿದೆ
3/2/11